



ಬ್ಯಾಂಕರ್: ನೀವು ಪ್ರತಿ ತಿಂಗಳು 6 ಸಾವಿರ ರೂ. ಕಟ್ಟಿದರೆ.

ತಿಮ್ಮ: ಕಟ್ಟಿದರೆ?

ಬ್ಯಾಂಕರ್: ನೀವು ಸತ್ತಾಗ ನಿಮ್ಮಗೆ ಒಂದು ಕೋಟಿ ರೂ. ಸಿಗುತ್ತದೆ.

ತಿಮ್ಮ: ಈಗ ಒಂದು ಕೋಟಿ ಕೊಡಿ, ನಾ ಸಾಯುವವರೆಗೆ ತಿಂಗಳಿಗೆ 6 ಸಾವಿರ ರೂ. ಕಟ್ಟುತ್ತೇನೆ.

★★★

ಮೇಷ್ಟ್ರು: ನನ್ನ ಕ್ಲಾಸಿನಲ್ಲಿ ನೀನು ನಿದ್ರಿಸಲು ಸಾಧ್ಯವಿಲ್ಲ ತಿಳಿಯಿತೇ?

ವಿದ್ಯಾರ್ಥಿ: ನಂಗೂ ಹಾಗೆ ಅನ್ನಿಸುತ್ತಿದೆ ಸಾರ್, ಇಷ್ಟು ಕಿರುಚಿ ನೀವು ಪಾಠ ಮಾಡುತ್ತಿದ್ದರೆ ಹೇಗೆ ತಾನೆ ನಾನು ನಿದ್ರಿಸಲು ಸಾಧ್ಯ?

★★★

ಆ ದಂಪತಿ ಮನೆಗೆ ಕಳ್ಳ ನುಗ್ಗಿದ. ಬರೀ 110 ಕೆ.ಜಿ. ತೂಗುತ್ತಿದ್ದ ಹೆಂಡತಿ ಕಳ್ಳನನ್ನು ಹಿಡಿದು ಆತನ ಮೇಲೆ ಕುಳಿತುಕೊಂಡಳು.

ಪತ್ನಿ: ಅಂತೂ ಕಳ್ಳನನ್ನು ಹಿಡಿದೆ ನೋಡಿ!

ಪತಿ: ಸರಿಯಾಗಿ ಮಾಡಿದೆ ಕಣೆ.

ಪತ್ನಿ: ಹೋಗಿ ಪೋಲಿಸರನ್ನು ಕರೆದುಕೊಂಡು ಬನ್ರೀ.

ಪತಿ: ಸರಿ ಕಣೇ.

ಪತ್ನಿ: ಯಾಕ್ರೀ ಇನ್ನೂ ಇಲ್ಲೇ ಇದ್ದೀರಲ್ಲ? ಯಾಕೆ ಹೋಗಿಲ್ಲ.

ಪತಿ: ಇಲ್ಲ ಕಣೇ ನನ್ನ ಚಪ್ಪಲಿ ಕಾಣ್ತಾ ಇಲ್ಲ.

ಕಳ್ಳ: ಯಪ್ಪಾ ಕೈ ಮುಗಿತೀನೋ ಮಾರಾಯ, ನನ್ನ ಚಪ್ಲಿನೇ ಹಾಕ್ಕೊಂಡು ಹೋಗಿ ಪೊಲೀಸರನ್ನು ಕರ್ಕೊಂಡು ಜಲ್ದಿ ಬಾ.

★★★

ಗುಂಡ: ಈ ನಾಯಿ ರೇಟು ಎಷ್ಟು?

ಅಂಗಡಿಯಾತ: ಯಾಕೆ ಸಾರ್?

ಗುಂಡ: ಕೊಂಡು ಕೊಳ್ಳುವುದಕ್ಕೆ ಮತ್ತಾಕೆ?

ಅಂಗಡಿಯಾತ: ಬರೀ 20 ಸಾವಿರ ರೂ. ಸಾಹೇಬ್ರೆ.

ಗುಂಡ: ಅಷ್ಟೊಂದಾ? ಯಾಕೆ ಅಷ್ಟೊಂದು ರೇಟು?

ಅಂಗಡಿಯಾತ: ಸರ್ ಅದು ಭಯಂಕರ ನಂಬಿಕಸ್ತ ಪ್ರಾಣಿ. 20 ಸಲ ಮಾರಿದೀನಿ, ಮತ್ತೆ ನನ್ನ ಹತ್ರಾನೇ ಬಂದಿದೆ.

★★★

ಗುಂಡ: ಅಪ್ಪ ಬಾ ಇಲ್ಲಿ.

ಅಮ್ಮ: ಅಪ್ಪನನ್ನು ಹಾಗೆಲ್ಲಾ ಕರೀಬಾರ್ದು, ಮರ್ಯಾದೆಯಿಂದ ಕರೀಬೇಕು.

ಗುಂಡ: ಆಯ್ತು. ಅಪ್ಪ, ಮರ್ಯಾದೆಯಾಗಿ ಬಾ ಇಲ್ಲಿ.

★★★

ಅಜ್ಜ: (ಮೊಮ್ಮಗನಿಗೆ) ಗುಂಡಾ ಬಚ್ಚಿಟ್ಟುಕೊಳ್ಳೋ ನಿಮ್ಮ ಟೀಚರ್ ಬರ್ತಿದಾರೆ. ನೀನು ಸ್ಕೂಲ್‌ಗೆ ಚಕ್ಕರ್ ಕೊಟ್ಟಿದ್ದರ ಬಗ್ಗೆ ವಿಚಾರಿಸೋಕೆ ಇರ್ಬೇಕು.

ಗುಂಡ: ತಾತ ಹಾಗಿದ್ರೆ ನೀನು ಬಚ್ಚಿಟ್ಕೊಬೇಕು. ನೀನು ತೀರ್ಕೊಂಡೆ ಅಂತ ನಾನು ಮಿಸ್‌ಗೆ ಹೇಳಿಬಿಟ್ಟಿದ್ದೀನಿ.

**(ಸಂಗ್ರಹ) ಕುಬೇರಪ್ಪ ಎಂ.ವಿಭೂತಿ**

